ಮಾಡಬೇಕು ಎಂಬ ಆಲೋಚನೆಯಾಗಲೀ ಅವಕಾಶವಾಗಲೀ ನನಗೆ ಬಂದಿರಲಿಲ್ಲ. ಶಾಲಾ ದಿನಗಳಲ್ಲಿ ರಂಗಭೂಮಿಗೆ ಸಂಗೀತ ಸಂಯೋಜನೆ ಮಾಡಲು ಶುರುಮಾಡಿದೆ. ನನ್ನ ಮೊದಲ ರಂಗಭೂಮಿ ಗುರು ಮಂಗೈ. ಅವರು ಈಗಲೂ ಯಾವ ನಾಟಕ ಮಾಡಿದರೂ ನನ್ನಿಂದ ಏನಾದರೂ ಕೆಲಸ ಮಾಡಿಸಿಕೊಳ್ಳುತ್ತಾರೆ.

ಎಷ್ಟೆಲ್ಲ ಹೆಸರಿನ ರಾಗಗಳಿವೆ. ಆದರೆ ನನ್ನಮ್ಮನ ಹೆಸರಿನಲ್ಲಿ ಯಾವ ರಾಗವೂ ಇಲ್ಲ. 'ನಾನೇ ಹೊಸ ರಾಗ ಸಂಯೋಜನೆ ಮಾಡಿ ಅದಕ್ಕೆ ಅಮ್ಮನ ಹೆಸರಿಡ್ತೇನೆ' ಎಂದು ಚಿಕ್ಕ ವಯಸ್ಸಿನಲ್ಲಿಯೇ ಒಂದಿಷ್ಟು ರಾಗ ಸಂಯೋಜನೆ ಮಾಡಲು ಪ್ರಯತ್ನಿಸಿದ್ದೆ. ಅಮ್ಮ ಅದನ್ನು ಕೇಳಿ 'ಈ ಹಾಡನ್ನು ನೀನೇ ಹೇಳಬೇಕು. ಅಷ್ಟು ಕಷ್ಟವಾಗಿದೆ' ಎಂದು ನಕ್ಕಿದ್ದರು. ಆಗಿನಿಂದಲೇ ನನಗೆ ರಾಗ ಸಂಯೋಜನೆ ಕುರಿತು ಆಸಕ್ತಿ ಇತ್ತು. ಅದು ಈಗ ಪ್ರಯೋಜನಕ್ಕೆ ಬರುತ್ತಿದೆ. ನನ್ನ ಪ್ರಕಾರ, ಸಿನಿಮಾ ಸಂಗೀತ ಎನ್ನುವುದು ದೃಶ್ಯದ ಹಾಗೆಯೇ, ಮಾತಿನ ಹಾಗೆಯೇ, ಪಾತ್ರದ ಭಾವದ ಹಾಗೆಯೇ ಸಿನಿಮಾದ ಅವಿಭಾಜ್ಯ ಭಾಗವಾಗಿಯೇ ಇರಬೇಕು.

◆ 'ನಾತಿಚರಾಮಿ' ಸಿನಿಮಾಕ್ಕೆ ಸಂಗೀತ ಸಂಯೋಜನೆ ಮಾಡಬೇಕು ಎಂದು ನಿಮಗೆ ಅನಿಸಿದ್ದು ಯಾವ ಕಾರಣಕ್ಕೆ?

'ಅರುವಿ' ಸಿನಿಮಾ ಮತ್ತು ಆ ಚಿತ್ರದ ಸಂಗೀತ ಸಾಕಷ್ಟು ಸುದ್ದಿ ಮಾಡಿದ ನಂತರ ಸಂಗೀತ ಸಂಯೋಜನೆ ಮಾಡಿಕೊಡುವಂತೆ ನನ್ನನ್ನು ಹಲವರು ಸಂಪರ್ಕಿಸುತ್ತಿದ್ದರು. ಮಂಸೋರೆ ಕೂಡ ನನ್ನನ್ನು ಅದೇ ಉದ್ದೇಶಕ್ಕೆ ಸಂಪರ್ಕಿಸಿದರು. ಆಗ ಅವರು ಸಂಧ್ಯಾರಾಣಿ ಅವರ ಜತೆ ಕೂತು ಕಥೆ ಮಾಡಿದ್ದೇನೆ ಎಂದು ಹೇಳಿದರು. ಆಗಲೇ ನನಗೆ ಆಸಕ್ತಿ ಹುಟ್ಟಿತು. ಭೇಟಿಯಾದಾಗ ಅವರು ಚಿತ್ರಕಲಾ ಪರಿಷತ್ ವಿದ್ಯಾರ್ಥಿಯಾಗಿದ್ದವರು ಅಂತ ಗೊತ್ತಾಯ್ತು. ನಂತರ ಅವರು ನಿರ್ದೇಶಿಸಿದ್ದ 'ಹರಿವು' ಸಿನಿಮಾ ನೋಡಿದೆ. ಅವರೂ 'ಅರುವಿ' ಸಿನಿಮಾ ನೋಡಿದರು. ಇಬ್ಬರಿಗೂ ಒಪ್ಪಿಗೆಯಾಗಿ 'ನಾತಿಚರಾಮಿ' ತಂಡದೊಂದಿಗೆ ಕೆಲಸ ಮಾಡಲು ಒಪ್ಪಿಕೊಂಡೆ.

◆ 'ನಾತಿಚರಾಮಿ' ಸಿನಿಮಾದಲ್ಲಿ ನೀವು ಏನೆಲ್ಲ ಪ್ರಯೋಗ ಮಾಡಿರುವಿರಿ?

ಯಾವೆಲ್ಲ ಸನ್ನಿವೇಶಗಳಲ್ಲಿ ಹಾಡು ಬೇಕು ಎಂದು ನಿರ್ದೇಶಕರು ಹೇಳಿದ್ದರೋ ಆ ಸನ್ನಿವೇಶಗಳನ್ನು ಮನೋಗತ ಮಾಡಿಕೊಂಡೆ. ಹೆಜ್ಜೆ ಹಾಕಿ ಕುಣಿಯುವ ರೀತಿಯ ಚೈತನ್ಯ ಇರುವ ಸಿನಿಮಾ ಇದಲ್ಲ. ಚೈತನ್ಯ ಎನ್ನುವುದು ಇದರಲ್ಲಿ ಅಂತರ್ವಾಹಿನಿಯಾಗಿ ಹರಿಯುತ್ತಿರುತ್ತದೆ. ಸಂಗೀತವೂ ಹಾಗೆ ಅಂತರ್ವಾಹಿನಿಯಾಗಿ ಹರಿಯುವ ರೀತಿಯೇ ಇರಬೇಕು ಎಂದುಕೊಂಡೆ. ಆ ಕಥೆಯನ್ನು ಸನ್ನಿವೇಶಗಳು ಹೊಮ್ಮಿಸುವ ಅರ್ಥವನ್ನು ನನ್ನೊಳಗೆ ನಾನು ವ್ಯಾಖ್ಯಾನಿಸಿಕೊಂಡೆ. ತೆರೆಯ ಮೇಲೆ ಕ್ಯಾಮೆರಾ ಕಥೆಯನ್ನು ದೃಶ್ಯಗಳ ಮೂಲಕ ತೋರಿಸುತ್ತಿರುತ್ತದೆ. ಆದರೆ ಆ ಸನ್ನಿವೇಶಗಳಲ್ಲಿನ ಹಲವು ಧ್ವನಿಗಳು ಸಾಂಕೇತಿಕವಾಗಿ ಹೊಮ್ಮಿಸುವ, ಆ ರಿಂಗಣವನ್ನು ಪ್ರೇಕ್ಷಕನ ಮನಸಲ್ಲಿ ರಿಂಗಣಿಸುವ ಕೆಲಸವನ್ನು ಸಂಗೀತ ಮಾಡಬೇಕು ಎನ್ನುವುದು ನನ್ನ ಮನಸ್ಸಿನಲ್ಲಿತ್ತು. ನಾನು ಸಂಯೋಜಿಸಿದ ಸಂಗೀತ, ಈ ಕಥೆಯನ್ನು ನಾನು ವ್ಯಾಖ್ಯಾನಿಸಿದ ರೀತಿಯ ಅಭಿವ್ಯಕ್ತಿ.

◆ ಟ್ಯೂನ್‌ಗಳು ನಿಮ್ಮೊಳಗೆ ಹುಟ್ಟುವ ಪ್ರಕ್ರಿಯೆಯ ಕುರಿತು ಹೇಳಿ.

ನಾನು ಕೀ ಬೋರ್ಡ್ ಮುಂದೆ ಪಟ್ಟು ಹಿಡಿದು ಕೂತು ಸಂಗೀತ ಕಟ್ಟುವ ರೀತಿಯ ಸಂಯೋಜಕಿ ಅಲ್ಲ. ಸಾಮಾನ್ಯವಾಗಿ ನನಗೆ ಟ್ಯೂನ್‌ಗಳು ಹೊಳೆಯುವುದು ಗಾಡಿ ಚಲಾಯಿಸುತ್ತಿರುವಾಗ. ಕೆಲವು ಸಲ ನಾನು ಭಕ್ತಿಭಾವವನ್ನು ಮನಸಲ್ಲಿ ತುಂಬಿಕೊಂಡು ನಿರಂತರವಾಗಿ ಬೇರೆ ಬೇರೆ ಬಗೆಯ ಸಂಗೀತಗಳನ್ನು ಕೇಳಿಸಿಕೊಳ್ಳುತ್ತಿರುತ್ತೇನೆ. ಆಗಲೂ ಕೆಲವೊಮ್ಮೆ ಟ್ಯೂನ್‌ಗಳು ಮಿಂಚಿನಂತೆ ಹೊಳೆಯುವುದುಂಟು. ಆದರೆ ಬಹುತೇಕ ನಾನು ವಾಕಿಂಗ್ ಹೋಗುವಾಗ, ಗಾಡಿ ಓಡಿಸುವಾಗಲೇ ಟ್ಯೂನ್‌ಗಳು ಹೊಳೆಯುವುದು. 'ನಾತಿಚರಾಮಿ' ಚಿತ್ರದ 'ವಸುಂಧರೆ' ಹಾಡಿನ ಟ್ಯೂನ್ ನಾನು ರೈಲ್ವೆ ಸ್ಟೇಷನ್‌ಗೆ ಹೋಗುವಾಗ ಕ್ಯಾಬ್‌ನಲ್ಲಿ ಹೊಳೆದಿದ್ದು. ಅಪರೂಪಕ್ಕೆ ಒಮ್ಮೊಮ್ಮೆ ಪ್ಲ್ಯಾನ್ ಮಾಡಿ ಈ ರೀತಿಯ ಫೇಸ್‌ನಲ್ಲಿ, ರಿದಂನಲ್ಲಿದ್ದರೆ ಸರಿಯಾಗಿರುತ್ತದೆ ಎಂದು ಸಂಯೋಜನೆ ಮಾಡಿರುವುದೂ ಇದೆ.

◆ ರಂಗಭೂಮಿ, ನಟನೆ, ಸಿನಿಮಾ, ಚಿತ್ರಕಲೆ ಎಲ್ಲವೂ ನಿಮಗೆ ಪರಿಚಯ ಇದೆ. ಇವೆಲ್ಲವೂ ನಿಮ್ಮೊಳಗಿನ ಸಂಗೀತಗಾರ್ತಿಯನ್ನು ಬೆಳೆಸಲು ಹೇಗೆ ಸಹಾಯಕವಾಗಿವೆ?

> ಈಗಿನ ಸಂಗೀತದ ಟ್ರೆಂಡ್ ಹೀಗಿದೆ, ನಾನು ಟ್ರೆಂಡ್ ಸೃಷ್ಟಿಸಬೇಕು ಎಂಬೆಲ್ಲ ವಿಷಯಗಳು ನನಗೆ ಮುಖ್ಯ ಅಲ್ಲ. ನಿರ್ದೇಶಕನ ಅಭಿರುಚಿ ಮತ್ತು ಸಿನಿಮಾ ಅಗತ್ಯ ಇವನ್ನೇ ಗಮನದಲ್ಲಿಟ್ಟುಕೊಂಡು ಸಂಗೀತ ಸಂಯೋಜಿಸುತ್ತೇನೆ.

ನನ್ನೆಲ್ಲ ಹವ್ಯಾಸಗಳು, ಆಸಕ್ತಿಗಳು ನನ್ನ ವ್ಯಕ್ತಿತ್ವವನ್ನು ರೂಪಿಸುವ ಸಂಗತಿಗಳು. ಅವೆಲ್ಲ ಕಲಾಪ್ರಕಾರಗಳೂ ಒಂದಕ್ಕೊಂದು ಪ್ರೇರಕವಾಗುತ್ತ, ಪೋಷಕವಾಗುತ್ತಾ ಇರುತ್ತವೆ. ಅದರಲ್ಲಿಯೂ ಹೀಗೆ ಹಲವು ಬಗೆಯ ಆಸಕ್ತಿಗಳು ಇದ್ದರೆ ಸಿನಿಮಾ ಸಂಗೀತದ ಪ್ರಕಾರಕ್ಕೆ ತುಂಬ ಉಪಯುಕ್ತವಾಗಿರುತ್ತದೆ.

◆ 'ನಾತಿಚರಾಮಿ' ಸಿನಿಮಾ ಓರ್ವ ವಿಧವೆಯ ಬದುಕು, ಹೆಣ್ಣನ್ನು ಪುರುಷಪ್ರಧಾನ ಸಮಾಜ ನೋಡುವ ಬಗೆಯನ್ನು ಚಿತ್ರಿಸುವ ಸಿನಿಮಾ ಎಂದು ಮೇಲ್ನೋಟಕ್ಕೆ ಅನಿಸುತ್ತದೆ. ಇಂಥದ್ದೊಂದು ಚಿತ್ರ ತೆರೆಗೆ ಬರುತ್ತಿರುವ ಸಮಯದಲ್ಲಿಯೇ ಮಹಿಳೆಯರ ಮೇಲೆ ನಡೆಯುತ್ತಿರುವ ಲೈಂಗಿಕ ಶೋಷಣೆಯನ್ನು ಪ್ರತಿಭಟಿಸುವ 'ಮೀ ಟೂ' ಅಭಿಯಾನವೂ ಚರ್ಚೆಯಲ್ಲಿದೆ. ಇದರ ಬಗ್ಗೆ ನಿಮ್ಮ ಅಭಿಪ್ರಾಯ ಏನು?

'ನಾತಿಚರಾಮಿ' ಬರೀ ಲೈಂಗಿಕ ಶೋಷಣೆಯ ಕುರಿತಾದ ಕಥೆ ಅಲ್ಲ. ವಿಧವೆಯ ಕಥೆಯಷ್ಟೇ ಅಲ್ಲ. ಇದಕ್ಕೆ ಅವೆರಡಕ್ಕೂ ಮೀರಿದ ಹಲವು ಆಯಾಮಗಳಿವೆ. ಭಾರತದಂಥ ದೇಶದಲ್ಲಿ ಒಬ್ಬ ಮಹಿಳೆ ಹೊರಸಮಾಜದಲ್ಲಿ ಮತ್ತು ಒಳಮನಸ್ಸಿನಲ್ಲಿ ಎದುರಿಸುವ ಸಂಘರ್ಷಗಳು ಈ ಸಿನಿಮಾದ ಕೇಂದ್ರಬಿಂದು. ಸಮಾಜದಲ್ಲಿ ನಾವು ಹೀಗೆಯೇ ಇರಬೇಕು, ಹೀಗೆಯೇ ಬದುಕಬೇಕು ಎಂಬ ಹಲವು ನಿಯಮ–ರಿವಾಜುಗಳು ಇರುತ್ತವೆ. ಆದರೆ ಪ್ರತಿಯೊಬ್ಬ ಮನುಷ್ಯನ ಹೃದಯದಲ್ಲಿಯೂ ಆ ಎಲ್ಲ ರಿವಾಜುಗಳನ್ನು ಮೀರಿದ ಅಭಿಲಾಷೆಗಳು ಇರುತ್ತವೆ. ಅವು ಕಪ್ಪು–ಬಿಳುಪು ಆಗಿರುವುದಿಲ್ಲ. ಸರಿ–ತಪ್ಪು ಎಂದು ನಿರ್ಧಾರಾತ್ಮಕವಾಗಿ ಹೇಳಲೂ ಸಾಧ್ಯವಿಲ್ಲ. ಕಪ್ಪು–ಬಿಳುಪು, ಸರಿ–ತಪ್ಪುಗಳು ಬೆರೆತ ಬೂದು ಬಣ್ಣದ ಭಾಗ ಅದು. ನನ್ನ ಮಟ್ಟಿಗೆ 'ನಾತಿಚರಾಮಿ', ಮನುಷ್ಯ ಸಂಬಂಧಗಳ ಕುರಿತಾದ ಹಲವು ಆಯಾಮಗಳ ಬೂದು ಬಣ್ಣದ ಸಂಗತಿಗಳನ್ನು ಶೋಧಿಸಲು ಸಿಕ್ಕ ಅವಕಾಶ. ಖಂಡಿತ ಇದು ಸ್ಟೀರಿಯೊಟೈಪ್ ಸಿನಿಮಾ ಅಲ್ಲ.

ಇನ್ನು 'ಮೀ ಟೂ' ಅಭಿಯಾನದ ಬಗ್ಗೆ ಹೇಳಬೇಕು ಎಂದರೆ ಖಂಡಿತ ಅದು ಬಹುಮುಖ್ಯ ಅಭಿಯಾನ. ಈಗ ಈ ಅಭಿಯಾನದಲ್ಲಿ ಮಹಿಳೆಯರ ಮೇಲೆ ನಡೆದ ಲೈಂಗಿಕ ಶೋಷಣೆಯ ಚರ್ಚೆ ಆಗುತ್ತಿದೆ. ಆದರೆ ಶೋಷಣೆಯನ್ನು ಅನುಭವಿಸಿದವರಲ್ಲಿ ಹೆಣ್ಣುಮಕ್ಕಳಂತೆ ಗಂಡುಮಕ್ಕಳೂ ಇದ್ದಾರೆ. ಹಾಗಾಗಿ ಅಂಥ ಶೋಷಣೆಯ ಬಗ್ಗೆ ಮಾತನಾಡುವ ಸಾಧ್ಯತೆಯೊಂದನ್ನು ಸೃಷ್ಟಿಸುವುದು ಅಗತ್ಯ. ಇದು ತುಂಬ ದೊಡ್ಡ ಬದಲಾವಣೆಯ ಸೂಚನೆ. ಆ ಬದಲಾವಣೆ ಇಂದಿನ ತುರ್ತೂ ಹೌದು.

ತನ್ನ ಮೇಲೆ ಆದ ಶೋಷಣೆಯನ್ನು ಧೈರ್ಯದಿಂದ ಹೇಳಿಕೊಳ್ಳುವ ವಾತಾವರಣ ಮತ್ತು ತನ್ನಂಥದೇ ಇನ್ನೊಬ್ಬ ಮನುಷ್ಯನ ಮೇಲೆ ಶೋಷಣೆ ಮಾಡಬಾರದು ಎಂಬ ಅರಿವು ಎರಡೂ ಇರುವ ಸಮಾಜವನ್ನು ನಾವು ಕಟ್ಟಬೇಕು. ಹೀಗೆ ಹೇಳುವಾಗ ನಾನು ನನ್ನ ಬಗ್ಗೆಯಷ್ಟೇ ಯೋಚಿಸುತ್ತಿಲ್ಲ. ನನ್ನ ಮುಂದಿನ ಪೀಳಿಗೆಯ ಬಗ್ಗೆಯೂ ಯೋಚಿಸುತ್ತಿದ್ದೇನೆ. ನಮ್ಮ ನಂತರದ ಪೀಳಿಗೆಗೆ ನಾವು ಎಂಥ ಸಮಾಜವನ್ನು ಬಿಟ್ಟುಹೋಗುತ್ತೇವೆ ಎನ್ನುವುದು ನಮ್ಮ ಪೀಳಿಗೆಯ ಮೌಲ್ಯವನ್ನು ನಿರ್ಧರಿಸುತ್ತದೆ. ಈ ದಿಶೆಯಲ್ಲಿ 'ಮೀ ಟೂ' ಅಭಿಯಾನ ಹೊಮ್ಮಿಸಿದ ಧ್ವನಿ ತುಂಬ ಮುಖ್ಯದ್ದು ಎಂದು ನನಗನಿಸುತ್ತದೆ. ●